

(6ನೇ ಪುಟದಿಂದ)

ಆಸ್ಟ್ರೇಲಿಯ, ಮಲೇಷ್ಯಾ, ಆಗ್ನೇಯ ಏಷ್ಯಾ ಮತ್ತು ಭಾರತೀಯ ಉಪಖಂಡದಲ್ಲಿ ಕಂಡುಬರುವ ಈ ಗಿಡವು ಒಣ– ಉಷ್ಣ ಹವೆಯಲ್ಲಿ ಚೆನ್ನಾಗಿ ಬೆಳೆಯುತ್ತದೆ. ಮಳೆಗಾಲದ ಆರಂಭ ಗಿಡ ನೆಡಲು ಸೂಕ್ತ ಕಾಲ. ಸಸಿ ಬಲಿಯುವ ತನಕ ಹೆಚ್ಚಿನ ನೀರು ಅಗತ್ಯ. ಒಂದು ವರ್ಷದಲ್ಲಿ ಕಾಯಿ ಬಿಡಲು ಶುರು ಮಾಡುವ ಈ ಮರಗಳು 35 ವರ್ಷಗಳ ಕಾಲ ಬಾಳಿಕೆ ಹೊಂದಿರುತ್ತವೆ. ಹಣ್ಣುಗಳಲ್ಲಿ ನಾಲ್ಕು ವಿಧಗಳಿದ್ದು, ಕೊಯ್ಲಿನ ಸೀಸನ್ ಆಯಾ ಪ್ರದೇಶಕ್ಕೆ ತಕ್ಕಂತೆ ಬದಲಾಗುತ್ತದೆ.

ಹೆಚ್ಚು ಮಾಗಿದ ಹಣ್ಣುಗಳು ಬಿರಿಯುವುದೂ ಉಂಟು. ಹೂವುಗಳು ಅತಿ ಚಿಕ್ಕದಾಗಿದ್ದು ಕಾಣಸಿಗುವುದು ಅಪರೂಪ. ಕಾಂಡಕ್ಕೆ ಅಂಟಿಕೊಂಡು ಗೊಂಚಲು ಕಾಯಿಗಳನ್ನು ಬಿಡುವುದು ಇದರ ವೈಶಿಷ್ಟ್ಯ. ಜೆಲ್ಲಿಯಂತಹ ಮಾಂಸಲ ತಿರುಳುಳ್ಳ ಸಿಹಿ ಸಹಿತ ಸ್ವಾದಿಷ್ಟ ಅಂಜೂರ ಹಣ್ಣುಗಳ ಕೇಂದ್ರ ಭಾಗದಲ್ಲಿ ಬೀಜ ಪುಂಜಗಳಿದ್ದು, ಅವುಗಳನ್ನು ಸಾಮಾನ್ಯವಾಗಿ ಕಣಜೀರಿಗೆ ಹುಳಗಳು ಬಾಧಿಸುತ್ತವೆ. ಆದ್ದರಿಂದ ಹಣ್ಣುಗಳನ್ನು 2–3 ಹೋಳುಗಳಾಗಿಸಿ ಕಡು ಬಿಸಿಲಲ್ಲಿ ಸುಮಾರು ಒಂದು ಗಂಟೆ ಒಣಗಿಸಿ ಬಳಿಕ ತಿನ್ನುವುದು ಒಳ್ಳೆಯದು.

ಪ್ರತಿಶತ 90 ರಷ್ಟು ಔದುಂಬರದ ಹಣ್ಣುಗಳನ್ನು ಒಣಗಿಸಿಯೇ ಡ್ರೈಫ್ರುಟ್ ಆಗಿ ಉಪಯೋಗಿಸುತ್ತಾರೆ.

## ಔದುಂಬರದ ಔಷಧೀಯ ಗುಣ ವಿಶೇಷಗಳು:

★ ಉಷ್ಣ ಗುಣ ಹೊಂದಿರುವ ಅತ್ತಿ ಹಣ್ಣು ಜೀರ್ಣಕ್ರಿಯೆ ಹೆಚ್ಚಿಸುತ್ತದೆ. ಜೇನುತುಪ್ಪದೊಡನೆ ಸೇವಿಸಿದರೆ ಮೂತ್ರದಲ್ಲಿ ಅಥವಾ ಮಲದಲ್ಲಿ ರಕ್ತ ಹೋಗುವುದನ್ನು ಗುಣಪಡಿಸುತ್ತದೆ.

★ ಹಣ್ಣನ್ನು ತಿನ್ನುವುದರಿಂದ ಕಫದ ಬಾಧೆ, ರಕ್ತನಾಳದ ದೋಷ ಉಪಶಮನವಾಗುತ್ತದೆ.

★ ಅತ್ತಿಮರದ ಹಾಲಿಗೆ ಭೇದಿ (ಅತಿಸಾರ) ನಿಲ್ಲಿಸುವ ಶಕ್ತಿಯಿದೆ.

★ ಮರದ ಚಕ್ಕೆಯ ಕಷಾಯ ಗರ್ಭ ರಕ್ಷಣೆಯ ಗುಣವುಳ್ಳದ್ದಾಗಿದ್ದು, ಮಧುಮೇಹ ರೋಗಿಗಳಿಗೂ ಸೂಕ್ತವಾಗಿದೆ.

ಇತರ ಉಪಯೋಗಗಳು:

ಪ್ರಾಥಮಿಕ ಹಂತದ ಪತಂಗಗಳಿಗೆ (ಅವು ಹುಳುವಾಗಿರುವಾಗ) ಆಹಾರವಾಗಿಯೂ ಈ ಹಣ್ಣು ಉಪಯುಕ್ತ.

ಎಳೆಯ ಕಾಯಿಗಳನ್ನು ಉಪ್ಪು ನೀರಿನಲ್ಲಿ ಹಾಕಿಟ್ಟು ದೀರ್ಘ ಕಾಲದವರೆಗೆ ಸಂಗ್ರಹಿಸಿ ಇವುಗಳಿಂದ ರುಚಿಕರ ಕಾಯಿಚಟ್ನಿ ತಯಾರಿಸಬಹುದು; ಉಪ್ಪಿನ ಕಾಯಿಗೂ ಬಳಸಬಹುದು.

ಅಥರ್ವ ವೇದದಲ್ಲಿ ಔದುಂಬರ ವೃಕ್ಷವನ್ನು ಶತ್ರುಪೀಡಹಾರಕ ಮತ್ತು ಉತ್ಕರ್ಷದಾಯಕ ಸಾಧನವೆಂದು ಬಣ್ಣಿಸಲಾಗಿದೆ. ಔದುಂಬರ ವೃಕ್ಷದಲ್ಲಿ ಗುರು ದತ್ತಾತ್ರೇಯರು ವಾಸ್ತವ್ಯವಿರುವರೆಂಬ ನಂಬಿಕೆ ಇದೆ. ಆದ್ದರಿಂದ ಈ ಮರದ ಬುಡಕ್ಕೆ ತುಪ್ಪದ ದೀಪ ಹಚ್ಚಿ ಪ್ರದಕ್ಷಿಣೆ ಬರುವವರಿದ್ದಾರೆ. ದತ್ತಾತ್ರೇಯ ಆಶ್ರಮಗಳಲ್ಲಿ ಈ ವೃಕ್ಷಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಸುತ್ತಾರೆ.